
ಪದಬಂಧ



ಎಡದಿಂದ ಬಲಕ್ಕೆ:

1. ಉದ್ದೇಶ ಏನೇ ಇರಲಿ, ಇಂಥ ತಾತ್ಸಾರ ಏಕೆ? (4)
3. ಸಿಂಹಾಸವನ್ನೇರ ಹೋದಾಗ ಕೊಲೆಯಾಯಿತು (3)
4. ವ್ಯಾಪಾರಿಯನ್ನು ಕಳುಹಿದ್ದು ಅಡವಿಗೇ ಹೌದೇ? (3)
6. ಗುಡಿ ಗೋಪುರ ಕೆಡವಿದ್ದಕ್ಕೆ ದೇಶದಾಚೆ ಹಾಕುವ ಶಿಕ್ಷೆ (4)
7. ಬಕಾಸುರನ ಬಟ್ಟೆಗಳಿಗೆ ತಕ್ಕ ಸಾಬೂನು (4)
8. ಮಹನೀಯನಾದವನ ಮರ್ಯಾದೆ ಹೋಗುವುದೆಂದರೆ? (4)
10. ದೇವತೆಯ ಜೊತೆಗೆ ರಕ್ಕಸ! ಈ ಜೋಡಿ ಹೇಗೆ? (4)
12. ಕೈಗೆ ಹೊರೆಯಾಗುವಂತೆ ಕಂದಾಯ (4)
14. ಅಂತಹದ್ದೇನಿಲ್ಲ ಬಿಡಿ. ಇದ್ದಲ್ಲೇ ಕಣ್ಮರೆಯಾಯಿತಷ್ಟೆ (4)
16. ಗಮಾರನ ಸ್ಥಿತಿ ನೋಡು, ದುಃಖಪಡು (3)
17. ಗುರಿ ತಪ್ಪಿಸಿ ಕೋಪ ಬರುವಂತೆ ಮಾಡು (3)
18. ವಿಶೇಷವೇನಿಲ್ಲ. ಹೀಗೆ ಚೂರೇ ಚೂರು ಅಷ್ಟೆ (4)

ಮೇಲಿಂದ ಕೆಳಕ್ಕೆ:

1. ಊರಿಗೆಲ್ಲ ಭಯ ಹರಡಿದ್ದು ಒಂದು ಸರೀಸೃಪ (3)
2. ಆಸೆ ನೆರವೇರಿತೆಂದು ಆಕೆಗೆ ರೋಮಾಂಚನ (3)
3. ಸಂದರ್ಭಕ್ಕೆ ಅನುಕೂಲವಾದದ್ದು ಸಂಜೆಯ ಸಮಯ (4)
5. ವಿನಯ ಪ್ರದರ್ಶನದ ಈ ಕ್ರಮ ತುಂಬ ಹೊಸದು (3)
7. ಸಂತೈಸು ಎಂದದ್ದನ್ನು ಪೀಡಿಸು ಎಂದು ಅರ್ಥೈಸಿದನೇ? (4)
9. ನೂರು ತರಹ ಪ್ರಶ್ನಿಸಿದರೂ ಒಂದೂ ಮರುಮಾತಿಲ್ಲ (4)
11. ಸಂಧಾನ ಮಾಡಿ ಪಡೆದದ್ದು ಒಳ್ಳೆಯ ಮನೆ (3)
13. ಕರ್ರಗಿನ ವಸ್ತುದ್ರವಿಸುವಂತೆ ಮಾಡು (4)
14. ಲಾಂಗೂಲದ ಬಾಲದಲ್ಲೊಂದು ಪುಟ್ಟ ಅಳತೆ (3)
15. ಆ ಶೂರನ ಹೆಸರು 'ಮನುಷ್ಯರ ಒಡೆಯ' (3)

### 25914ರ ಉತ್ತರಗಳು

ಎಡದಿಂದ ಬಲಕ್ಕೆ:

1. ಕಂಪನ; 3. ಹಿರಿದು; 4. ನಗರಿ; 6. ಪವಡಿಸು; 7. ಮುಜುಗರ; 9. ವರ್ಣಮಾಲೆ; 11. ಬಹುಮಾನ; 15. ತವಕ; 16. ಬದುಕು; 17. ರಜನಿ.

ಮೇಲಿಂದ ಕೆಳಕ್ಕೆ:

1. ಕಂದುಕ; 2. ನನಸು; 3. ಹಿನ್ನುಡಿ; 5. ರಿವಾಜು; 6. ಪಲ್ಲವ; 8. ರಸನ; 10. ಮಾರುತ; 12. ಹುಳುಕು; 13. ಆಕರ; 14. ಕಂಬನಿ.


## ಪ್ರಶ್ನಾ ಂಕಣ

# ಪನ್ನಂಬರಅದೇನು?

ಪನ್ನಂಬರ (ಆ್ಯಂಬರ್ ಗ್ರೀಸ್) ಅದೊಂದು ಪರಿಮಳ ಮೂಲವಸ್ತು. ಅತ್ಯುತ್ಕೃಷ್ಟವಾದ, ಅತ್ಯಂತ ಜನಪ್ರಿಯವಾದ, ಹಾಗಾಗಿ ಅತೀವ ಬೆಲೆಯ ಕೆಲ ಸುಗಂಧ ದ್ರವ್ಯಗಳ ಒಂದು ಪ್ರಧಾನ ಘಟಕ ಅದು. ಆದರೆ ಈ ವಸ್ತುವಿನ ಮೂಲ ಹಂತ ಮಾತ್ರ ಅತ್ಯಂತ ಅಸಹ್ಯಕರ, ದುರ್ಗಂಧಕರ!

ಈ ವೈಚಿತ್ರ್ಯ, ಈ ವಿಪರ್ಯಾಸ ಏಕೆಂದರೆ ಪನ್ನಂಬರ ತಯಾರಾಗುವುದು ಒಂದು ನಿರ್ದಿಷ್ಟ ಸಾಗರ ಪ್ರಾಣಿಯ ಕರುಳಿನಲ್ಲಿ. ಆ ಪ್ರಾಣಿ 'ಸ್ಪರ್ಮ್ ತಿಮಿಂಗಿಲ' (ಚಿತ್ರ1 ನೋಡಿ). ಸ್ತನಿ ವರ್ಗಕ್ಕೇ ಸೇರಿರುವ ತಿಮಿಂಗಿಲಗಳಲ್ಲಿ ಎರಡು ವಿಧಗಳಿವೆ: 'ಹಲ್ಲಿನ ತಿಮಿಂಗಿಲಗಳು ಮತ್ತು ಬಲೀನ್ ತಿಮಿಂಗಿಲಗಳು.' ಹಲ್ಲಿನ ತಿಮಿಂಗಿಲಗಳ ಗುಂಪಿಗೆ ಸೇರಿರುವ ಸ್ಪರ್ಮ್ ತಿಮಿಂಗಿಲ ತುಂಬ ಬೃಹದಾಕಾರದ ಪ್ರಾಣಿ. (ಚಿತ್ರ1 ರಲ್ಲಿರುವ ಮನುಷ್ಯರ ಗಾತ್ರವನ್ನು ಹೋಲಿಸಿ ಗಮನಿಸಿ).

ಸ್ಪರ್ಮ್ ತಿಮಿಂಗಿಲ ಕಡಲಿನ ನಾನಾ ಪ್ರಾಣಿಗಳನ್ನುಮೀನುಗಳು, ಸ್ಕ್ವಿಡ್ ಇತ್ಯಾದಿಹಿಡಿದು ತಿನ್ನುತ್ತದೆ. ಹಾಗೆ ನುಂಗಿದ ಸ್ಕ್ವಿಡ್‌ಗಳಂಥ ಮೃದ್ವಂಗಿಗಳ 'ಕೊಕ್ಕು'ಗಳಂತಹ ಗಟ್ಟಿ ಭಾಗಗಳು ಕೆಲಬಾರಿ ಜೀರ್ಣವಾಗದೆ ತಿಮಿಂಗಿಲದ ಕರುಳಿನಲ್ಲಿ ಅತ್ತಿತ್ತ ಸರಿಯುತ್ತ, ಅಲ್ಲಲ್ಲಿ ಚುಚ್ಚುತ್ತ ತ್ರಾಸಕಾರಿಯಾಗುತ್ತವೆ. ಹಾಗಾದಾಗ ತಿಮಿಂಗಿಲದ ಕರುಳಿನಲ್ಲಿ ಕೆಸರಿನಂತಹ ಒಂದು ದ್ರವ್ಯ ಅಂಥ ಅಪಾಯಕಾರೀ ವಸ್ತುವಿಗೆ ಲೇಪಗೊಳ್ಳುತ್ತ ಕ್ರಮೇಣ ಒಂದು ಗಟ್ಟಿ ಉಂಡೆ ರೂಪ ತಾಳುತ್ತದೆ. ನಾನಾ ಆಕಾರಗಳ, ನಾನಾ ಬಣ್ಣಗಳ ಇಂಥ ಉಂಡೆಗಳು (ಚಿತ್ರ 2,3,4) ಮುಂದೊಮ್ಮೆ ತಿಮಿಂಗಿಲದ ಮಲದೊಡನೆ



ವಿಸರ್ಜನೆಗೊಳ್ಳುತ್ತವೆ; ಗಟ್ಟಿಯಾದ ಭಾರೀ 'ಸಗಣಿ ಉಂಡೆ'ಗಳಂತೆ ಸಾಗರದಲ್ಲಿ ತೇಲತೊಡಗುತ್ತವೆ. ಈ ಹಂತದಲ್ಲಿ ಸುವಾಸನೆಯ ಸೋಂಕೂ ಇರದ ಈ ವಸ್ತು ಬಿಸಿಲು ಮತ್ತು ಲವಣ ಜಲದ ಪ್ರಭಾವದಿಂದ ನಿಧಾನವಾಗಿ ಮಾರ್ಪಡುತ್ತದೆ; ವಿಧ ವಿಧ ಪರಿಮಳಗಳನ್ನು (ಬೇರೆ ಬೇರೆ ಉಂಡೆಗಳು ಪಡೆವ ಸುವಾಸನೆಗಳು ಬೇರೆ ಬೇರೆ!) ಗಳಿಸುತ್ತವೆ; 'ಪನ್ನಂಬರ' ಆಗುತ್ತವೆ. ಕಡಲ ಮೇಲ್ಮೈಯಲ್ಲಿ ಅಲೆಗಳೊಡನೆ ಏಳುತ್ತ ಬೀಳುತ್ತ, ಎಲ್ಲೆಲ್ಲೋ ಅಲೆದಾಡಿ ಮುಂದೆಂದೋ ಸಾಗರ ತೀರಕ್ಕೆ ಬಂದು ಬೀಳುತ್ತವೆ. ಗುರುತಿಸಿ ಪಡೆದವರಿಗೆ ಭಾರೀ ಹಣದ ಅದೃಷ್ಟ ಒದಗುತ್ತದೆ.

ಆ್ಯಂಬರ್‌ಗ್ರೀಸ್ ಅನ್ನು ಅತ್ಯಲ್ಪ ಪ್ರಮಾಣಗಳಲ್ಲಿ ನಿರ್ದಿಷ್ಟ ಪರಿಮಳ ರಾಸಾಯನಿಕಗಳಿಗೆ ಬೆರಸಿದರೆ ಅಂಥ ದ್ರವ್ಯಗಳ ಸುಗಂಧ ಗುಣಮಟ್ಟ ಹೆಚ್ಚುತ್ತದೆ; ಚರ್ಮದ ಮೇಲೆ ದೀರ್ಘಕಾಲ ಉಳಿವ ಸಾಮರ್ಥ್ಯ ಹೆಚ್ಚುತ್ತದೆ. ಎಂಥ ವಸ್ತು! ಎಂಥ ಉಪಯೋಗ! ಎಷ್ಟು ವಿಚಿತ್ರ! ಹೌದಲ್ಲ?

■ ಎನ್. ವಾಸುದೇವ್